ಈ ಲೇಖನದ ವಿಷಯಾನುಕ್ರಮಣಿಕೆ

ಮೂರು ತರಹದ ಇಂದ್ರಪದವಿ 2

ಸೃಷ್ಟಿಯ ಆದಿಯಿಂದ ಅಂತ್ಯದವರೆಗಿನ ಇಂದ್ರಪದವಿ 5

ಮನ್ವಂತರದಿಂದ ಮನ್ವಂತರಕ್ಕೆ ಬದಲಾಗುವ ಇಂದ್ರಪದವಿ 7

ಪುಣ್ಯ ಇರುವವರೆಗೆ ಇರುವ ಇಂದ್ರಪದವಿ 13

ವಿಶ್ವನಂದಿನಿ ಲೇಖನಮಾಲೆ — 106

## ಮೂರು ತರಹದ ಇಂದ್ರಪದವಿ

ಪಂಡಿತ ಶ್ರೀ ಮಾಳಗಿ ಗುರುರಾಜಾಚಾರ್ಯರು ಒಂದು ತಾತ್ವಿಕ ಪ್ರಶ್ನೆ ಕೇಳಿದ್ದಾರೆ —

**ಪಾಂಡವರು ಹಾಗೂ ಕೃಷ್ಣ ಒಂದೊಂದು ಮನ್ವಂತರದಲ್ಲಿ ಒಬ್ಬೊಬ್ಬರು ಇಂದ್ರಪದವಿಯಲ್ಲಿದ್ದರು. ಅವರಲ್ಲಿ ಪುರಂದರನು (ಅರ್ಜುನ) ಮಾತ್ರ ಎರಡನೆ ಬಾರಿ ಇಂದ್ರಪದವಿಯನ್ನು ಆಳುತ್ತಿರುವದು.**

**ಇಂದ್ರನ ಕಕ್ಷೆ ಎಂಟನೆಯದು. ಭೀಮ ಕೃಷ್ಣರ ಪ್ರಶ್ನೆ ಏಳುವದಿಲ್ಲ. ಆದರೆ, ಧರ್ಮರಾಜ ಹಾಗೂ ನಕುಲ ಸಹದೇವರು ಹನ್ನೆರಡನೆ ಮತ್ತು ಹದಿನೆಂಟನೆ ಕಕ್ಷೆಯಲ್ಲಿ ಇರುವವರು.**

**ಹೀಗಾಗಿ ಇಂದ್ರಪದವಿಯನ್ನು ಹೇಗೆ ಆಳಿದರು? ತಾರತಮ್ಯಕ್ಕೆ ಚ್ಯುತಿ ಬಂದಂತಾಗಲಿಲ್ಲವೇ?**

ತುಂಬ ಉತ್ತಮವಾದ ಪ್ರಶ್ನೆ. ವಿಸ್ತಾರವಾಗಿ ಉತ್ತರವನ್ನು ತಿಳಿಯೋಣ.

ಮೊದಲಿಗೆ ಮೂರು ರೀತಿಯ ಇಂದ್ರಪದವಿಗಳಿವೆ.

**ಒಂದು ಸೃಷ್ಟಿಯ ಆದಿಯಿಂದ ಪ್ರಳಯಕಾಲದವರೆಗೆ ಬದಲಾಗದ ಇಂದ್ರಪದವಿ.**

**ಎರಡನೆಯದು ಮನ್ವಂತರದಿಂದ ಮನ್ವಂತರಕ್ಕೆ ಬದಲಾಗುವ ಇಂದ್ರಪದವಿ.**

**ಮೂರನೆಯದು ಕರ್ಮ ಮುಗಿಯುವವರೆಗೆ ಇರುವ ರಾಜಪದವಿಯಂತಹ ಇಂದ್ರಪದವಿ.**

ಇವು ಅರ್ಥವಾಗಬೇಕಾದರೆ ಮೊದಲಿಗೆ ಕಾಲದ ಗಣನೆ ನಮಗೆ ಅರ್ಥವಾಗಬೇಕು.

ಕೃತಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗಗಳ ಒಟ್ಟು ಪರಿಮಾಣ, ನಮ್ಮ ಲೆಕ್ಕದಲ್ಲಿ, 43 ಲಕ್ಷದ 20 ಸಾವಿರ ವರ್ಷಗಳು.
ನಾಲ್ಕೂಯುಗಗಳ ಸಮೂಹವವನ್ನು ಮಹಾಯುಗ ಎನ್ನುತ್ತಾರೆ.

ಈ ರೀತಿಯ ಮಹಾಯುಗಗಳು 71 ಬಾರಿ ಆವರ್ತವಾದರೆ ಒಂದು ಮನ್ವಂತರವಾಗುತ್ತದೆ. ಈ ರೀತಿಯ ಮನ್ವಂತರಗಳು ಒಟ್ಟು ಹದಿನಾಲ್ಕಿವೆ.

ಈ ಹದಿನಾಲ್ಕು ಮನ್ವಂತರಗಳು ಒಮ್ಮೆ ಒಮ್ಮೆ ಆರಂಭವಾಗಿ ಮುಗಿದರೆ ಚತುರ್ಮುಖ ಬ್ರಹ್ಮದೇವರ ಒಂದು ಹಗಲು. ಅಷ್ಟೇ ರಾತ್ರಿ.

ಆ ರೀತಿಯ 360 ದಿವಸಗಳು ಅವರ ಒಂದು ವರ್ಷ. ಆ ರೀತಿಯ ನೂರು ವರ್ಷಗಳು ಬ್ರಹ್ಮಾಯುಷ್ಯ. ಆ ನೂರು ವರ್ಷಗಳು ಮುಗಿದ ಬಳಿಕ ಮಹಾಪ್ರಳಯವಾಗುತ್ತದೆ. ಪರಮಾತ್ಮ ಎಲ್ಲವನ್ನೂ ತನ್ನ ಉದರದಲ್ಲಿ ಸೇರಿಸಿಕೊಳ್ಳುತ್ತಾನೆ. ಮತ್ತೆ ಬ್ರಹ್ಮದೇವರ ನೂರುವರ್ಷದಷ್ಟು ಕಾಲ ಪ್ರಳಯವಿರುತ್ತದೆ. ಆ ನಂತರ, ಮತ್ತೆ ಪರಮಾತ್ಮ ಸೃಷ್ಟಿಯನ್ನು ಆರಂಭಿಸುತ್ತಾನೆ.

ಈಗ ಮೂರು ತರಹದ ಇಂದ್ರರ ಕುರಿತು ತಿಳಿಯೋಣ.

# ಸೃಷ್ಟಿಯ ಆದಿಯಿಂದ ಅಂತ್ಯದವರೆಗಿನ ಇಂದ್ರಪದವಿ

ಪರಮಾತ್ಮ ಬ್ರಹ್ಮಾಂಡವನ್ನು ಸೃಷ್ಟಿಸುವ ಮುಂಚೆ ಬ್ರಹ್ಮಾಂಡಕ್ಕೆ ಕಾರಣವಾದ ತತ್ವಗಳನ್ನು ಸೃಷ್ಟಿಸುತ್ತಾನೆ. ಮೊದಲನೆಯದು ಮಹತ್ ತತ್ವ. ಇದಕ್ಕೆ ಅಭಿಮಾನಿ ಸರಸ್ವತೀಪತಿ ಬ್ರಹ್ಮದೇವರು.

ಎರಡನೆಯದು ಅಹಂಕಾರ ತತ್ವ. ಇದಕ್ಕೆ ಅಭಿಮಾನಿಯಾದವರು ಪಾರ್ವತೀಪತಿ ರುದ್ರದೇವರು.

ಮೂರನೆಯದು ಇಂದ್ರಿಯ ತತ್ವ. ಈ ಇಂದ್ರಿಯತತ್ವಗಳಲ್ಲಿ ಮನಸ್ಸಿಗೆ ಮತ್ತು ಕೈಗಳಿಗೆ ಅಭಿಮಾನಿಯಾಗಿ ಶಚೀಪತಿಯಾದ ಇಂದ್ರನನ್ನು ಪರಮಾತ್ಮ ಸೃಷ್ಟಿಸುತ್ತಾನೆ. ಆ ನಂತರ ಉಳಿದ ದೇವತೆಗಳು ಸೃಷ್ಟರಾಗುತ್ತಾರೆ.

ತತ್ವಕ್ಕೆ ಅಧಿಪತಿಯಾದ ಈ ಇಂದ್ರ ತತ್ವಾಭಿಮಾನಿ ಎಂದು ಕರೆಸಿಕೊಳ್ಳುತ್ತಾನೆ.  ಇವನ ಪದವಿ ಶಾಶ್ವತವಾದದ್ದು. ಈ ಇಂದ್ರ ಹಿಂದಿನ ಇಪ್ಪತ್ತು ಬ್ರಹ್ಮಕಲ್ಪಗಳಲ್ಲಿ ಸಾಧನೆ ಮಾಡಿ ಈ ಪದವಿಗೆ

ಬಂದಿರುತ್ತಾನೆ. ಈ ಸಮಗ್ರ ಸೃಷ್ಟಿಯಲ್ಲಿ ತನ್ನ ಸಾಧನೆಯನ್ನು ಪೂರ್ಣ ಮಾಡಿ ಜಗತ್ತಿನ ರಕ್ಷಣೆಯನ್ನು ಮಾಡಿ ಮೋಕ್ಷವನ್ನು ಪಡೆಯುತ್ತಾನೆ. ಮುಂದಿನ ಸೃಷ್ಟಿಯಲ್ಲಿ ಈ ಪದವಿಗಾಗಿ ಸಾಧನೆ ಮಾಡುತ್ತಿರುವ ಇಂದ್ರಪದವಿಗೆ ಯೋಗ್ಯನಾದ ಮತ್ತೊಬ್ಬ ಮಹಾಸಜ್ಜೀವ ಇಂದ್ರನಾಗಿ ಅವತರಿಸಿ ಬರುತ್ತಾನೆ. ಇವನೇ ಶಚೀಪತಿ. ಇವನಿಗೆ ಪುರಂದರ ಎಂದೂ ಹೆಸರಿದೆ. ಈ ಇಂದ್ರ ಮನ್ಮಥನಿಗೆ ಸಮಾನನಾದ ದೇವತೆ. ಶಂಕರನ ಪತ್ನಿಯಾದ ಪಾರ್ವತೀದೇವಿ, ಶೇಷನ ಪತ್ನಿಯಾದ ವಾರುಣೀದೇವಿ, ಗರುಡನ ಪತ್ನಿಯಾದ ಸೌಪರ್ಣೀದೇವಿ, ಕೃಷ್ಣನ ಷಣ್ಮಹಿಷಿಯರು, ಗರುಡ ಶೇಷ ರುದ್ರರು, ಬ್ರಹ್ಮ ಸರಸ್ವತಿಯರು ಮುಂತಾಗಿ ಎಲ್ಲ ಋಜುದೇವತೆಗಳು ಇಷ್ಟು ಜನರನ್ನು ಬಿಟ್ಟು ಉಳಿದ ಎಲ್ಲ ದೇವತೆಗಳಿಗಿಂತ — ಸೂರ್ಯ, ಚಂದ್ರ, ಗಣಪತಿ, ಕುಬೇರ ಮುಂತಾದ ಎಲ್ಲ ದೇವತೆಗಳಿಗಿಂತ ಹಿರಿಯನಾದ ದೇವತೆ ಇವನು. ದೇವೇಂದ್ರ ಎಂದರೆ ಇವನೆ.

ನಾರಾಯಣನ ಜೊತೆಯಲ್ಲಿ ನರನಾಗಿ, ರಾಮಾಯಣದ ಕಾಲದಲ್ಲಿ ವಾಲಿಯಾಗಿ,

ಮಹಾಭಾರತದ ಕಾಲದಲ್ಲಿ ಅರ್ಜುನನಾಗಿ ಅವತಾರ ಮಾಡಿದ ಇಂದ್ರ ಇವನೇ.

**ಇಡಿಯ ಸೃಷ್ಟಿಯ ಕಾಲದಲ್ಲಿ ಇವನ ಸ್ಥಾನಕ್ಕೆ ಮತ್ತೊಬ್ಬರು ಬರುವದಿಲ್ಲ. ಇವನದು ಶಾಶ್ವತ ಪದವಿ.**

ಈ ಇಂದ್ರ ಇರುವದು ಅಂತರಿಕ್ಷಲೋಕದ ಮೇಲಿರುವ ಸ್ವರ್ಗಲೋಕದಲ್ಲಿ. ನಾವೇನು ಗ್ರಹ ನಕ್ಷತ್ರಗಳನ್ನು ಕಾಣುತ್ತೇವೆ, ಅದು ಅಂತರಿಕ್ಷಲೋಕ. ಅದರ ಮೇಲ್ಭಾಗದಲ್ಲಿರುವದು ಸ್ವರ್ಗಲೋಕ. ಮುಖ್ಯವಾಗಿ ಅಮರಾವತಿ ಎಂದರೆ ಇದೇ.

## ಮನ್ವಂತರದಿಂದ ಮನ್ವಂತರಕ್ಕೆ ಬದಲಾಗುವ ಇಂದ್ರಪದವಿ

ನಮ್ಮ ಲೆಕ್ಕದಲ್ಲಿ 43 ಲಕ್ಷದ ಇಪ್ಪತ್ತುಸಾವಿರ ವರ್ಷಗಳ ಕಾಲ ಒಂದು ಮಹಾಯುಗ. ಆ ರೀತಿಯ 71 ಮಹಾಯುಗಗಳು ಕಳೆದರೆ ಒಂದು ಮನ್ವಂತರ. ಆ ರೀತಿಯ ಹದಿನಾಲ್ಕು ಮನ್ವಂತರಗಳಿವೆ ಎಂದು ತಿಳಿದಿವೆವಲ್ಲ, ಈ ಒಂದೊಂದು ಮನ್ವಂತರಕ್ಕೆ ಒಬ್ಬೊಬ್ಬ ಇಂದ್ರ

ಇರುತ್ತಾನೆ. ಈ ಇಂದ್ರ ತತ್ವಾಭಿಮಾನಿಯಾದ ಇಂದ್ರನೇ ಆಗಿರಬೇಕು ಎಂಬ ನಿಯಮವಿಲ್ಲ.

ಈ ಇಂದ್ರನ ಆಧಿಪತ್ಯ ಒಂದು ಮನ್ವಂತರಕ್ಕೆ ಮಾತ್ರ ಮೀಸಲು. ಅಂದರೆ ಒಂದೊಂದು ಮನ್ವಂತರದಲ್ಲಿಯೂ ಇಂದ್ರ ಬದಲಾಗುತ್ತಿರುತ್ತಾನೆ.

ಭೂಲೋಕದಲ್ಲಿ ಉಂಟಾಗುವ ಮಳೆ ಬೆಳೆಗಳು ಇವನ ಅಧೀನ. ಸ್ವರ್ಗದಲ್ಲಿರುವ ಇಂದ್ರನ ಆದೇಶದಂತೆ ಈ ಮನ್ವಂತರದ ಅಧಿಪತಿಯಾದ ಇಂದ್ರ ಜಗತ್ತಿನ ರಕ್ಷಣೆಯನ್ನು ಮಾಡುತ್ತಾನೆ.

ಈ ಮನ್ವಂತರಾಧಿಪತಿಯಾದ ಇಂದ್ರ ವಾಸವಿರುವದು ಮೇರುಪರ್ವತದ ಮೇಲ್ಭಾಗದಲ್ಲಿರುವ ಅಮರಾವತಿಯಲ್ಲಿ. (ಇವರು ದೇವತೆಗಳಾದ್ದರಿಂದ ಸ್ವರ್ಗಲೋಕದಲ್ಲಿಯೂ ಇವರಿಗೆ ವಾಸಸ್ಥಾನವಿರುತ್ತದೆ.)

ಹದಿನಾಲ್ಕು ಮನ್ವಂತರಗಳು ಎಂದು ಹೇಳಿದೆನಲ್ಲ, ಮೊದಲನೆಯ ಸ್ವಾಯಂಭುವ ಮನ್ವಂತರದಲ್ಲಿ ರುಚಿ ಮತ್ತು ಆಕೂತಿಯರ ಮಗನಾಗಿ ಅವತರಿಸಿದ

ಯಜ್ಞನಾಮಕ ಪರಮಾತ್ಮನೇ ಇಂದ್ರನಾಗಿರುತ್ತಾನೆ. ಇವನ ಪತ್ನಿ ಮಹಾಲಕ್ಷ್ಮೀದೇವಿ.  ಇವನೇ ಶ್ರೀಕೃಷ್ಣನಾಗಿ ಅವತರಿಸುವದು.

ಎರಡನೆಯ ಸ್ವಾರೋಚಿಷ ಮನ್ವಂತರದಲ್ಲಿ ರೋಚನ ಎಂಬ ಹೆಸರಿನ ವಾಯುದೇವರು ಇಂದ್ರನಾಗುತ್ತಾರೆ. ಭಾರತೀ ಇವರ ಪತ್ನಿ.  ಇವರೇ ಭೀಮಸೇನನಾಗಿ ಅವತರಿಸುವದು.

ಮೂರನೆಯ ಉತ್ತಮ ಎಂಬ ಹೆಸರಿನ ಮನ್ವಂತರದಲ್ಲಿ ಯಮಧರ್ಮ ಸತ್ಯಜಿತ್ ಎಂಬ ಹೆಸರಿನಿಂದ ಇಂದ್ರನಾಗುತ್ತಾನೆ. ಇವನ ಪತ್ನಿ ಶ್ಯಾಮಲಾ.  ಇವನೇ ಮಹಾಭಾರತಕಾಲಕ್ಕೆ ಯುಧಿಷ್ಠಿರನಾಗಿ ಹುಟ್ಟಿಬರುತ್ತಾನೆ.

ನಾಲ್ಕನೆಯ ತಾಪಸ ಎಂಬ ಮನ್ವಂತರದಲ್ಲಿ ಅಶ್ವಿನೀದೇವತೆಗಳಲ್ಲಿ ಮೊದಲನೆಯವನಾದ ನಾಸತ್ಯ ಇಂದ್ರನಾಗಿರುತ್ತಾನೆ. ಆಗ ಅವನ ಹೆಸರು ತ್ರಿಶಿಖ ಎಂದು. ಇವನ ಪತ್ನಿ ಉಷಾದೇವಿ.  ಇವನೇ ನಕುಲನಾಗಿ ಹುಟ್ಟಿಬರುತ್ತಾನೆ.

ಐದನೆಯ ರೈವತ ಮನ್ವಂತರದಲ್ಲಿ ಅಶ್ವಿನೀದೇವತೆಗಳಲ್ಲಿ ಎರಡನೆಯವನಾದ ದಸ್ರ ಇಂದ್ರನಾಗುತ್ತಾನೆ. ಆಗ ಅವನ ಹೆಸರು, ವಿಭು ಎಂದು.  ಇವನೇ ಸಹದೇವನಾಗಿ ಹುಟ್ಟಿಬರುತ್ತಾನೆ.[1] (ಅಶ್ವಿನೀದೇವತೆಗಳಿಬ್ಬರಿಗೂ ಒಬ್ಬಳೇ ಪತ್ನಿ, ಉಷಾದೇವಿ. ಉಷಃಕಾಲಕ್ಕೆ ಅಭಿಮಾನಿಯಾದ ದೇವತೆ)

ಆರನೆಯ ಚಾಕ್ಷುಷ ಮತ್ತು ಏಳನೆಯ (ಈಗಿನದ್ದು) ವೈವಸ್ವತ ಮನ್ವಂತರದಲ್ಲಿ ತತ್ವಾಭಿಮಾನಿಯಾದ ಶಚೀಪತಿಯಾದ ಇಂದ್ರನೇ ಮನ್ವಂತರಾಧಿಪತಿಯಾದ ಇಂದ್ರನಾಗುತ್ತಾನೆ. ಇವನೇ ಅರ್ಜುನನಾಗಿ ಹುಟ್ಟಿಬರುವದು.

---

[1] ಬನ್ನಂಜೆ ಸಮಸ್ಯೆಯನ್ನುಂಟು ಮಾಡಿರದ ಸ್ಥಳವೇ ಇಲ್ಲ.  ಅವರು ತಮ್ಮ ತಾತ್ಪರ್ಯನಿರ್ಣಯದ ವ್ಯಾಖ್ಯಾನದಲ್ಲಿ ನಾಸತ್ಯನ ಹೆಸರು ಸತ್ಯಜಿತ್ ಎಂದೂ,  ದಸ್ರನ ಹೆಸರು ತ್ರಿಶಿಖ ಎಂದೂ, ಯಮಧರ್ಮನ ಹೆಸರು ವಿಭು ಎಂದೂ ಕಲಸುಮೇಲೋಗರ ಮಾಡಿಟ್ಟಿದ್ದಾರೆ. ಶ್ರೀಮದ್ಭಾಗವತದಲ್ಲಿ ಸ್ಪಷ್ಟವಾಗಿ ಯಮಧರ್ಮನ ಹೆಸರು ಸತ್ಯಜಿತ್, ನಾಸತ್ಯ ತ್ರಿಶಿಖ ಮತ್ತು ದಸ್ರ ವಿಭು ಎಂದು ಪರಿಸ್ಪಷ್ಟ ಉಲ್ಲೇಖವಿದೆ, ಭಾಗವತದ ಉಪನ್ಯಾಸದ ಸಂದರ್ಭದಲ್ಲಿ ಈ ವಿಷಯವನ್ನು ಪ್ರಮಾಣಗಳ ಸಮೇತ ಪ್ರತಿಪಾದಿಸುತ್ತೇನೆ.

ಎಂಟನೆಯ ಮನ್ವಂತರದಲ್ಲಿ ಬಲಿಚಕ್ರವರ್ತಿ ಇಂದ್ರನಾಗುತ್ತಾನೆ. ಹಾಗೆಯೇ ಅದ್ಭುತ, ಶಂಭು (ರುದ್ರದೇವರಲ್ಲ, ಆ ಹೆಸರಿನ ದೇವತೆ) ವಿಧೃತಿ, ಋತಧಾಮಾ, ದಿವಸ್ಪತಿ ಮತ್ತು ಶುಚಿ ಎನ್ನುವ ದೇವತೆಗಳು ಕ್ರಮವಾಗಿ ಒಂಭತ್ತರಿಂದ ಹದಿನಾಲ್ಕನೆಯ ಮನ್ವಂತರದವರೆಗಿನ ಮನ್ವಂತರಗಳಲ್ಲಿ ಇಂದ್ರರಾಗುತ್ತಾರೆ.

ಒಂದೊಂದು ಯುಗದ ಮಧ್ಯದಲ್ಲಿಯೂ ಉತ್ಪಾತಗಳಾಗಿ ಲಕ್ಷಾಂತರ ಜನ ಸಾಯುತ್ತಾರೆ.

ಮಹಾಯುಗಗಳ ಮಧ್ಯದಲ್ಲಿ ಮಹಾ ಉತ್ಪಾತಗಳಾಗಿ ಕೋಟಿ ಕೋಟಿ ಸಂಖ್ಯೆಯಲ್ಲಿ ಜನ ಸಾಯುತ್ತಾರೆ. ಹೊಸದಾಗಿ ಜೀವಸಂಕುಲ ಆರಂಭವಾಗುತ್ತದೆ.

ಒಂದೊಂದು ಮನ್ವಂತರದ ಮಧ್ಯದಲ್ಲಿಯೂ ಇಡಿಯ ಭೂಮಿ ನೀರಿನಲ್ಲಿ ಮುಳುಗಿಬಿಡುತ್ತದೆ. ಆ ನಂತರ ಮತ್ತೆ ಸಮಗ್ರ ಜೀವಸಂಕುಲದ ಆರಂಭ.

ಬ್ರಹ್ಮದೇವರ ಒಂದೊಂದು ಹಗಲು ಮುಗಿದಾಗಲೂ ಭೂಮಿ, ಅಂತರಿಕ್ಷ ಮತ್ತು ಸ್ವರ್ಗಲೋಕಗಳು

(ಇವನ್ನೇ ತ್ರಿಲೋಕ ಎಂದು ಕರೆಯುವದು) ನೀರಿನಲ್ಲಿ ಮುಳುಗಿಬಿಡುತ್ತವೆ. ಇಡಿಯ ರಾತ್ರಿ ಕಳೆದ ಬಳಿಕ ಮತ್ತೆ ಜೀವಜಾತದ ಮರುಸೃಷ್ಟಿ.

ಈ ರಾತ್ರಿಪ್ರಳಯದ ಸಂದರ್ಭದಲ್ಲಿ ತತ್ವಾಭಿಮಾನಿಯಾದ ಇಂದ್ರನ ಸಮೇತವಾಗಿ ಎಲ್ಲ ದೇವತೆಗಳು ಅದಕ್ಕಿಂತಲೂ ಮೇಲಿನ ಲೋಕಗಳಲ್ಲಿ ವಾಸ ಮಾಡುತ್ತಾರೆ. ಬ್ರಹ್ಮದೇವರ ಪೂರ್ಣ ಆಯುಷ್ಯ ಮುಗಿಯಲು ಕೆಲವು ಸಮಯ ಮುಂಚೆ ಮಹಾಪ್ರಳಯವಾಗುತ್ತದೆ.

ಆಗ ತತ್ವಾಭಿಮಾನಿ ಇಂದ್ರ ಸಂಸಾರವನ್ನು ಕಳೆದುಕೊಂಡು ಪರಮಾತ್ಮನ ಉದರವನ್ನು ಸೇರಿ ಮುಕ್ತನಾಗುತ್ತಾನೆ. ಅವನ ಪದವಿಯನ್ನು ಅದೇ ಯೋಗ್ಯತೆಯ ಮತ್ತೊಬ್ಬ ಜೀವ ಮುಂದಿನ ಸೃಷ್ಟಿಯಲ್ಲಿ ಅಲಂಕರಿಸಿ ಜಗತ್ತಿನ ರಕ್ಷಣೆಯನ್ನು ಮಾಡುತ್ತ ಸಾಧನೆ ಮಾಡಿಕೊಳ್ಳುತ್ತಾನೆ.

## ಪುಣ್ಯ ಇರುವವರೆಗೆ ಇರುವ ಇಂದ್ರಪದವಿ

ಮೇಲಿನ ಎರಡೂ ಇಂದ್ರಪದವಿಗಳು ದೇವತೆಗಳಿಗೆ ಮಾತ್ರ ಮೀಸಲು. ಆದರೆ, ಮನುಷ್ಯರಿಗೂ ಇಂದ್ರನಾಗುವ ಅವಕಾಶವಿದೆ. ಜಗತ್ತಿನಲ್ಲಿ ಮಹಾಸತ್ಕರ್ಮವನ್ನು ಮಾಡಿದ ಮನುಷ್ಯರು, ಪರೋಪಕಾರ ಮುಂತಾದವನ್ನು ಮಾಡಿದ ಉತ್ತಮರು, ತಪಸ್ಸು ಮಾಡಿದ ರಾಕ್ಷಸರೂ ಸಹ ಈ ಇಂದ್ರಪದವಿಯನ್ನು ಪಡೆಯಬಹುದು. ಮೇರುಪರ್ವತದ ಕೆಳಭಾಗದ ಪ್ರಾಂತಗಳಲ್ಲಿ ಅಮರಾವತಿ ಎಂಬ ಪಟ್ಟಣವಿದೆ. ಅಲ್ಲಿ ಇವರು ಇಂದ್ರರಾಗುತ್ತಾರೆ. ಎಷ್ಟು ಪುಣ್ಯವಿದೆಯೋ ಅಷ್ಟು ದಿವಸಗಳ ಕಾಲ ಆ ಅಮರಾವತಿಯ ಆಧಿಪತ್ಯ ಇವರದು. ಆ ನಂತರ ಅವರನ್ನು ಕೆಳಗಿಳಿಯುತ್ತಾರೆ, ಅಷ್ಟು ಸುಖವನ್ನು ಅನುಭವಿಸುವ ಪುಣ್ಯ ಮಾಡಿರುವ ಮತ್ತೊಬ್ಬ ಮನುಷ್ಯನೋ ರಾಕ್ಷಸನೋ ಆ ಇಂದ್ರಪದವಿಯನ್ನೇರುತ್ತಾನೆ. ಇದೊಂದು ಮೇಲಿನ ಅಮರಾವತಿಯ ನಕಲು.

ಮೇಲೆ ಹೇಳಿದ್ದನ್ನು ಸಂಗ್ರಹ ಮಾಡಿ ಹೇಳುವದದಾದರೆ —

ತತ್ವಾಭಿಮಾನಿಯಾದ, ಶಚೀಪತಿಯಾದ ಇಂದ್ರ ಇವನು ಸೃಷ್ಟಿಯ ಆದಿಯಿಂದ ಸೃಷ್ಟಿಯ ಅಂತ್ಯದವರೆಗೆ ಒಬ್ಬನೇ. ಇವನದು ಶಾಶ್ವತಪದವಿ. ಸಮಗ್ರ ಜೀವರನ್ನು ನಿಯಮಿಸುವದು ಇವನ ಕರ್ತವ್ಯ.

ಹದಿನಾಲ್ಕು ಮನ್ವಂತರಾಧಿಪತಿಗಳಾದ ಹದಿಮೂರು ಇಂದ್ರರು. (ಎರಡು ಮನ್ವಂತರಗಳಲ್ಲಿ ತತ್ವಾಭಿಮಾನಿಯಾದ ಇಂದ್ರನೇ ಮನ್ವಂತರಾಧಿಪತಿಯೂ ಆಗುತ್ತಾನೆ.) 71 ಮಹಾಯುಗಗಳ ಕಾಲ ಇವರ ಆಧಿಪತ್ಯ. ಲೋಕಕ್ಕೆ ಮಳೆ ಬೆಳೆಗಳನ್ನು ಕರುಣಿಸುವದು ಇವನ ಕರ್ತವ್ಯ.

ಪುಣ್ಯದ ಅನುಸಾರವಾಗಿ ದೊರೆಯುವ ಇಂದ್ರನ ಪದವಿ. ಅಮರಾವತಿಯ ನಕಲಾದ ಮತ್ತೊಂದು ಅಮರಾವತಿಯಲ್ಲಿ ಇವರ ವಾಸ. ಇವರ ಹೆಂಡತಿಗೂ ಶಚೀ ಎಂದು ಹೆಸರು.

ಜೀವಪ್ರಪಂಚದಲ್ಲಿ ಯಾರು ಬೇಕಾದರೂ ಈ ಇಂದ್ರಪದವಿಯನ್ನು ಏರಬಹುದು. ಜಗತ್ತಿನ ಮೇಲೆ ಇವರಿಗೆ ಅಧಿಕಾರವಿರುದಿಲ್ಲ. ಒಂದೂರಿನ ರಾಜನಂತೆ ಇವರಿರುತ್ತಾರೆ, ಅಷ್ಟೆ.

ಇದರಲ್ಲಿ ತಾರತಮ್ಯವನ್ನು ನಿರ್ಣಯಿಸುವ ಪದವಿ ತತ್ವಾಭಿಮಾನಿಯಾದ ಇಂದ್ರನ ಪದವಿಯಷ್ಟೇ. ಮನ್ವಂತರದ ಅಧಿಪತಿಯಾದ ಇಂದ್ರನ ಪದವಿ ಇದು ತಾರತಮ್ಯನಿರ್ಣಾಯಕವಲ್ಲ. ಹೀಗಾಗಿ ಯಾರೇ ಮನ್ವಂತರಾಧಿಪತಿಗಳಾದರೂ ಅದು ತಾರತಮ್ಯಕ್ಕೆ ಭಂಗವನ್ನುಂಟು ಮಾಡುವದಿಲ್ಲ. ಮತ್ತು, ತತ್ವಾಭಿಮಾನಿಯಾದ ಇಂದ್ರ ಮನ್ವಂತರಾಧಿಪತಿಯಾದರೂ ಅವನು ಯೋಗ್ಯತೆಯಲ್ಲಿ ಉತ್ತಮನೇ. ಅಧಮನಾಗುವದಿಲ್ಲ. ಮನ್ವಂತರಾಧಿಪತಿಯ ಪದವಿ ಸಣ್ಣದು. ತತ್ವಾಭಿಮಾನಿಯ ಪದವಿ ದೊಡ್ಡದು. ಸರ್ವೋತ್ತಮನಾದ ಪರಮಾತ್ಮ ಮತ್ತು ಜೀವೋತ್ತಮನಾದ ಮುಖ್ಯಪ್ರಾಣ ಇವರಿಬ್ಬರೂ ಮನ್ವಂತರಾಧಿಪತಿಗಳಾದರೂ ಅವರು ಹೇಗೆ ಸರ್ವೋತ್ತಮ, ಜೀವೋತ್ತಮರಾಗಿಯೇ ಇರುತ್ತಾರೆಯೋ, ಹಾಗೆ.

ಮೇಲಿನ ಎಲ್ಲ ವಿಷಯಗಳೂ ಭಾಗವತಾದಿ ಪುರಾಣಗಳಲ್ಲಿ ಹೇಳಲ್ಪಟ್ಟಿವೆ. ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ತಮ್ಮ ಗ್ರಂಥಗಳಲ್ಲಿ ವಿಶದವಾಗಿ ತಿಳಿಸಿಹೇಳಿದ್ದಾರೆ.

ಇಂಥ ಗಹನತತ್ವಗಳನ್ನು ಬರೆದಿಟ್ಟ ವೇದವ್ಯಾಸದೇವರಿಗೆ, ನಿರ್ಣಯಸಿದ ಶ್ರೀಮದಾಚಾರ್ಯರಿಗೆ, ಕಥೆಗಳ ಮುಖಾಂತರ ನಮಗೆ ತಿಳಿಹೇಳಿದ ಋಷಿಮುನಿಗಳಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಸಮರ್ಪಿಸೋಣ.

— ವಿಷ್ಣುದಾಸ ನಾಗೇಂದ್ರಾಚಾರ್ಯ



# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491